

# ಹೂವಿನೂರಿನ ದಾರಿಯಲಿ..

ಎಚ್.ಕೆ. ಶರತ್
ಚಿತ್ರ: ನಿಖಿಲ್ ಪಿ.







ಹೂವಿನ ಲೋಕದಲ್ಲಿರುವ ವೈವಿಧ್ಯ ಬೆರಗುಗೊಳಿಸುವಂಥದ್ದು. ಹೈಸ್ಕೂಲಿನ ಬಾಟನಿಯಲ್ಲಿ ಓದಿದ ಹೂವು ಹಣ್ಣಾಗಿ ರೂಪಾಂತರ ಹೊಂದುವ ಪ್ರಕ್ರಿಯೆಯಲ್ಲಿರುವ ವಿಸ್ಮಯ ನಮ್ಮನ್ನು ಸದಾ ಕಾಡುವಂಥದ್ದು. ಹೂವಿನೊಂದಿಗೆ ಸಂಬಂಧ ಕುದುರಿಸಿಕೊಂಡಿರುವುದು ಕೇವಲ ಮನುಷ್ಯನ ಮನಸ್ಸು ಮಾತ್ರವಲ್ಲ. ದುಂಬಿಗೂ ಹೂವಿನ ಮಕರಂದವೇ ಬದುಕಿನ ಆಧಾರ. ಚಿಟ್ಟೆಗಳಿಗೂ ಹೂವೆಂದರೆ ಇನ್ನಿಲ್ಲದ ವ್ಯಾಮೋಹ.

ಹೂವು ಹಲವರ ಬದುಕಿನ ರಥ ಎಳೆಯುತ್ತಿರುವ ಸಾರಥಿಯೂ ಹೌದು. ಸಂತೆಯಲ್ಲಿ ಮಾರಾಟಕ್ಕಿಟ್ಟಿರುವ ಆಕರ್ಷಕ ಸರಕು ಸಹಾ. ಹೂವಿನ ಮಾರುಕಟ್ಟೆ ಯಾವುದೇ ಊರಿನಲ್ಲಿರಬಹುದಾದ ವಿಶೇಷ ಸ್ಥಳ. ಹೂವು ಬೆಳೆದವರಿಗೂ, ಬಿಡಿಸಿದವರಿಗೂ, ಮಾಲೆ ಕಟ್ಟುವವರಿಗೂ, ಮಾರುವವರಿಗೂ, ಕೊಳ್ಳುವವರಿಗೂ ಒಂದಲ್ಲ ಒಂದು ರೀತಿಯಲ್ಲಿ ಸಂತೃಪ್ತಿ ದಯಪಾಲಿಸುತ್ತದೆ.

ಮಕ್ಕಳಿಂದ ಮಹಿಳೆಯರ ಮುಡಿಗೂ ದೇವರ ಗುಡಿಗೂ ಶುಭಸಮಾರಂಭಗಳ ಚಪ್ಪರದಡಿಗೂ ಹೂವಿನ ಅಲಂಕಾರ ಬೇಕೇಬೇಕು. ಹೂವೆಂದ ಕೂಡಲೇ ಹಿತ್ತಿಲೂ ಅದರೊಂದಿಗೆ ಬೆಸೆದುಕೊಂಡಿರುವ ನೆನಪುಗಳೂ ಎದುರು ನಿಲ್ಲುತ್ತವೆ.

ಮನೆ ಮುಂದೆ ಹೂ ಬೆಳೆಸಲು ಮನಸ್ಸು ಮಾಡದವರಿಗೂ ದಿನಾ ದೇವರಿಗೆ ತರಹೇವಾರಿ ಹೂವುಗಳನ್ನು ಅರ್ಪಿಸಿ ತಮ್ಮ ಬೇಡಿಕೆ ಈಡೇರಿಸಿಕೊಳ್ಳುವ ಉಮೇದು. ಹಾಗಾಗಿಯೇ ಮುಂಜಾನೆ ವಾಯುವಿಹಾರಕ್ಕೆ ತೆರಳುವವರ ಕೈಯಲ್ಲೊಂದು ಕವರ್ ಇದ್ದೇ ಇರುತ್ತದೆ. ತಾವು ನಡೆಯುವ ಹಾದಿಯಲ್ಲಿ ಎಲ್ಲೆಲ್ಲಿ ಹೂವುಗಳು ಕಣ್ಣಿಗೆ ಬೀಳುತ್ತವೆಯೋ ಅಲ್ಲೆಲ್ಲ ತಮ್ಮ ಕೈಚಳಕ ತೋರುತ್ತಾರೆ.

ಮನೆ ಮುಂದೆ ದಿನಾ ಅರಳಿ ಬಾಡುವ ಹೂವುಗಳು ಕ್ಷಣಕ್ಷಣಕ್ಕೂ ತಮ್ಮ ರೂಪ ಬದಲಿಸುತ್ತಲೇ ಇರುತ್ತವೆ. ಮುಂಜಾನೆ ಇಬ್ಬನಿಯ ಹೊದಿಕೆಯಲ್ಲಿ ಸೂರ್ಯನೊಂದಿಗಿನ ಸರಸದ ವೇಳೆಯಲ್ಲಿ ಕಾಣುವ ಹೂವಿನ ಸೌಂದರ್ಯ ವಿಶಿಷ್ಟವಾದುದು. ಕಣ್ಣಿನ ಕ್ಯಾಮೆರಾ ಸೆರೆಹಿಡಿಯಲು ಸೋತ ಹೂವಿನ ಸೌಂದರ್ಯ, ನಾವೇ ಸೃಷ್ಟಿಸಿರುವ ಥರಾವರಿ ಲೆನ್ಸುಗಳನ್ನು ಮೈಗಾನಿಸಿಕೊಳ್ಳುವ ಕ್ಯಾಮೆರಾದಲ್ಲಿ ಅದ್ಭುತ ರೀತಿಯಲ್ಲಿ ಅನಾವರಣಗೊಳ್ಳುವುದನ್ನು ಇಲ್ಲಿನ ಚಿತ್ರಗಳೂ ಪುಷ್ಟೀಕರಿಸುತ್ತವೆ.